ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue-1, Sep-Oct, 2023, Pp. 38-41.
©IIMRD, Mysuru.

IIMRD JOURNALS

www.iimrd.com

# ಮಾರಮ್ಮನ ಪುರಾಣ

ಡಾ. ನಾ. ಮುನಿರಾಜು*

*ಅತಿಥಿ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.

***ಸಾರಾಂಶ:* (Abstract)**

*ನಿಸರ್ಗದ ವೈಚಿತ್ರ್ಯಗಳು, ಪ್ರಕೋಪಗಳು ಆದಿಮಾನವನ ಮನಸ್ಸಿನಲ್ಲಿ ಭಯದ ಬೀಜವನ್ನು ಬಿತ್ತಿದವು. ಆತಂಕ, ತಲ್ಲಣಗಳಿಗೆ ಗುರಿಮಾಡಿದವು. ಆಗೋಚರವಾದ ಶಕ್ತಿಗಳಿಂದ ಸಂಭವಿಸುತ್ತಿದ್ದ ಸಾವು ನೋವುಗಳು, ಹಾನಿಗಳು, ಉಪದ್ರವಗಳು ಅವನನ್ನು ಕೆಂಗೆಡಿಸಿದವು. ಭಯದಿಂದ ನಿಸರ್ಗವನ್ನು ಪೂಜಿಸಲಾರಂಭಿಸಿದರನು. ಆದಿಮಾನವನ ಭಯದ ಕಾರಣದಿಂದಾಗಿ ರೂಪುಗೊಂಡ ಭಕ್ತಿಯೇ ವ್ಯಕ್ತರೂಪ ಪಡೆದು ಮಾತೃದೇವತಾ ಆರಾಧನೆಗೆ ಎಡೆಮಾಡಿ ಕೊಟ್ಟಿತೆಂದು ಹೇಳಬಹುದು. ಈ ಮಾತೃದೇವತಾ ಉಪಾಸನೆ ಬಹಳ ಪ್ರಾಚೀನವಾದದ್ದು. ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲಿಯೂ ಕಂಡುಬರುವ ಸಾರ್ವತ್ರಿಕ ಆರಾಧನೆಯಾಗಿದೆ. ಮಾತೃದೇವತೆಯನ್ನು 'ಅಮ್ಮಾ' ಎಂದು ಕರೆದು ಸಮೃದ್ಧ ಮಳೆ, ಬೆಳೆಗಾಗಿ ಸಾಂಕ್ರಾಮಿಕ ರೋಗರುಜಿನಗಳು ಪರಿಹಾರಕ್ಕಾಗಿ ಅಮ್ಮನಿಗೆ ಶರಣಾಗಿ ಜಾತ್ರೆ ಉತ್ಸವಗಳನ್ನು ಮಾಡಿ ಆರಾಧಿಸುವುದು ಅನೂಚಾನವಾಗಿ ನಡೆದುಬರುತ್ತಿದೆ.*

***ಮುಖ್ಯಪದಗಳು* (Keywords)** *ಮಾರಮ್ಮ, ಪುರಾಣ, ವೃಕ್ಷ ದೇವತೆ, ಜಾನಪದ ಸಂಸ್ಕೃತಿ.*

## ಪೀಠಿಕೆ

ನಿಸರ್ಗದ ವೈಚಿತ್ರ್ಯಗಳು, ಪ್ರಕೋಪಗಳು ಆದಿಮಾನವನ ಮನಸ್ಸಿನಲ್ಲಿ ಭಯದ ಬೀಜವನ್ನು ಬಿತ್ತಿದವು. ಆತಂಕ, ತಲ್ಲಣಗಳಿಗೆ ಗುರಿಮಾಡಿದವು. ಆಗೋಚರವಾದ ಶಕ್ತಿಗಳಿಂದ ಸಂಭವಿಸುತ್ತಿದ್ದ ಸಾವು ನೋವುಗಳು, ಹಾನಿಗಳು, ಉಪದ್ರವಗಳು ಅವನನ್ನು ಕೆಂಗೆಡಿಸಿದವು. ವೈಚಾರಿಕತೆ ಎಂದರೇನೆಂಬುದನ್ನೇ ಅರಿಯದ ಆದಿಮಾನವನು ಕೇವಲ ಭಯದಿಂದ, ತನ್ನಲ್ಲಿ ಅಂಜಿಕೆಯನ್ನುಂಟುಮಾಡಿದ್ದ ನಿಸರ್ಗವನ್ನೇ ತಾಯಿಯಾಗಿ ಕಾಪಾಡು ಎಂದು ಪೂಜಿಸಲಾರಂಭಿಸಿದರನು. ತಾಯಿಯನ್ನು ಒಲಿಸಿಕೊಳ್ಳುವ ಸಲುವಾಗಿ ಆರಾಧಿಸಿದನು. ಬಲಿ ಇತ್ಯಾದಿಗಳಿಂದ ಸಂತುಷ್ಟಗೊಳಿಸಲು ಯತ್ನಿಸಿದನು. ಆತಂಕಕಾರಿಯೂ ಲಯ ಸ್ವರೂಪಿಣಿಯೂ ಆದ ನಿಸರ್ಗ ದೇವತೆಯನ್ನು ತನಗನ್ನಿಸಿದ ನಾನಾ ವಿಧವಾದ ಸೇವೆಗಳನ್ನು ಕೈಗೊಂಡನು. ಹೀಗೆ ಮನುಷ್ಯ ಸಂಸ್ಕೃತಿಯ ವಿಕಾಸನದ ಪ್ರಾಥಮಿಕ ಹಂತದಲ್ಲಿ ಆದಿಮಾನವನ ಭಯದ ಕಾರಣದಿಂದಾಗಿ ರೂಪುಗೊಂಡ ಭಕ್ತಿಯೇ ವ್ಯಕ್ತರೂಪ ಪಡೆದು ಮಾತೃದೇವತಾ ಆರಾಧನೆಗೆ ಎಡೆಮಾಡಿಕೊಟ್ಟಿತೆಂದು ಹೇಳಬಹುದು.

ಈ ಮಾತೃದೇವತಾ ಉಪಾಸನೆ ಬಹಳ ಪ್ರಾಚೀನವಾದದ್ದು. ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲಿಯೂ ಕಂಡುಬರುವ ಸಾರ್ವತ್ರಿಕ ಆರಾಧನೆಯಿದು. ಭಾರತದಲ್ಲಿ ಸಿಂಧೂಕೊಳ್ಳದ ಸಂಸ್ಕೃತಿಯ ಕಾಲದಿಂದಲೂ

*Please cite this article as:* ಡಾ. ನಾ. ಮುನಿರಾಜು (2023). ಮಾರಮ್ಮನ ಪುರಾಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.38–41.*

ಮಾತೃದೇವತಾ ಉಪಾಸನೆ ಒಂದಲ್ಲ ಒಂದು ರೀತಿಯಲ್ಲಿ ಉಳಿದು ಬೆಳೆದು ಬಂದಿದೆ. ದ್ರಾವಿಡ ಸಂಸ್ಕೃತಿಯ ಭದ್ರ ನೆಲೆಯಾದ ದಕ್ಷಿಣ ಭಾರತದಲ್ಲಿಯೂ ವ್ಯಾಪಕವಾಗಿ ಪ್ರಚಾರದಲ್ಲಿದೆ. ಮಾತೃದೇವತೆಯನ್ನು 'ಅಮ್ಮಾ' ಎಂದು ಕರೆದು ಸಮೃದ್ಧ ಮಳೆ, ಬೆಳೆಗಾಗಿ ಸಾಂಕ್ರಾಮಿಕ ರೋಗರುಜಿನಗಳು ಪರಿಹಾರಕ್ಕಾಗಿ ಅಮ್ಮನಿಗೆ ಶರಣಾಗಿ ಜಾತ್ರೆ ಉತ್ಸವಗಳನ್ನು ಮಾಡಿ ಆರಾಧಿಸುವುದು ಅನೂಚಾನವಾಗಿ ನಡೆದು ಬಂದಿತು. ದ್ರಾವಿಡ ಸಂಸ್ಕೃತಿಯಲ್ಲಿ 'ಅಮ್ಮಾ' ಎಂದು ಕರೆಸಿಕೊಂಡವಳು ವೈದಿಕ ಸಂಸ್ಕೃತಿಯಲ್ಲಿ 'ಅಂಬಾ', 'ಅದಿತಿ' ಎನಿಸಿಕೊಂಡಳು.

ಅಮ್ಮಾ ಭೂಮಿಗೆ ಬೇಸಾಯಕ್ಕೆ, ನೀರಿಗೆ, ಮರ–ಗಿಡಗಳಿಗೆ, ಬೆಟ್ಟ–ಗುಡ್ಡ, ಕಾಡು–ಮೇಡುಗಳಿಗೆ ಸಂರಕ್ಷಕ ದೇವತೆ ಎನಿಸಿಕೊಂಡಳು. ವೈದಿಕರು ಅನ್ನಪೂರ್ಣೆ, ಬನಶಂಕರಿ, ಶಾಕಾಂಬರಿ ಮೊದಲಾದ ಹೆಸರುಗಳಿಂದ ಕರೆದು ಪೂಜಿಸಲಾರಂಭಿಸಿದರು. ಆರ್ಯ ದ್ರಾವಿಡರೆಂಬ ಬೇಧವಿಲ್ಲದೆ ಎಲ್ಲರ ಅಮ್ಮ ಎನಿಸಿಕೊಂಡಳು. ಜನ ತೊಂದರೆಗಳ ನಿವಾರಣೆಗಾಗಿ ಅಗೋಚರವಾಗಿದ್ದ ಅಮ್ಮನನ್ನು ಸರಿದೋರಿದ ರೂಪಗಳಲ್ಲಿ ಕಾಣಲಾರಂಭಿಸಿದರು. ಮಣ್ಣು, ಮರ, ಕಲ್ಲುಗಳನ್ನು ಅಮ್ಮನೆಂದು ಪೂಜಿಸುತ್ತಿದ್ದ ಜನ ಸಂಸ್ಕೃತಿ ವಿಕಾಸನವಾಗುತ್ತಾ ಬಂದೆಂತೆಲ್ಲಾ ಕಾಷ್ಟ ಶಿಲ್ಪ, ಲೋಹ ಶಿಲ್ಪ, ಶಿಲಾ ವಿಗ್ರಹಗಳ ರೂಪದಲ್ಲಿ ಸ್ಮಾರಕಗಳನ್ನು ನಿರ್ಮಿಸಿ ಬಂಡಿ, ತೇರು, ಜಾತ್ರೆಗಳನ್ನು ಆರಾಧನೆಯ ಅಂಗಗಳನ್ನಾಗಿಸಿದರು. ಭೂ ಸಂಪತ್ತು, ಜಲಸಂಪತ್ತು, ಸಸ್ಯಸಂಪತ್ತು, ಕೃಷಿ ಇತ್ಯಾದಿಗಳೊಂದಿಗೆ ಅಮ್ಮನ ನಿಕಟ ಸಂಬಂಧವನ್ನು ಗುರುತಿಸಲಾರಂಭಿಸಿದ ಜನಪದರು ಗಂಗಮ್ಮ, ಮರದಮ್ಮ, ಎಲ್ಲಮ್ಮ, ದುರ್ಗಮ್ಮ, ಚೌಡಮ್ಮ, ಕಾಳಮ್ಮ, ಬಿಸಿಲಮ್ಮ, ಮಾಯಮ್ಮ, ಮರಕೆಯಮ್ಮ, ಬೇವಿನಮರದಮ್ಮ, ಗೋಣಿಮರದಮ್ಮ ಇತ್ಯಾದಿ ಹೆಸರುಗಳಿಂದ ಕರೆಯಲಾರಂಭಿಸಿದರು. ಹೀಗೆ ಮಾರಮ್ಮ ಇಡೀ ದಕ್ಷಿಣ ಭಾರತದ ಅತ್ಯಂತ ಪ್ರಬಲ ಶಕ್ತಿದೇವತೆಯಾಗಿ ಮಾರ್ಪಟ್ಟಳು. ವೈದಿಕ ಸಂಸ್ಕೃತಿಯ ಮಾರಮ್ಮನನ್ನು ಸಪ್ತ ಮಾತೃಕೆಯರಲ್ಲಿ ಒಬ್ಬಳೆಂದು ಸಾರಿತು. ಮಾರಮ್ಮ ವೃಕ್ಷದೇವತೆ, ಸಂತಾನ ದೇವತೆ, ಪುರಾಣ ದೇವತೆ, ಜನಾಂಗ ದೇವತೆ, ರೋಗ ನಿವಾರಣಾ ದೇವತೆಯಾಗಿ ಕಂಗೊಳಿಸಲಾರಂಭಿಸಿದಳು.

ಮಾರಿಯ ಹುಟ್ಟು ಹೇಗಾಯಿತೆಂಬುದನ್ನು ಕುರಿತು ಜೋಡಿ ಬುರುಡೆಗಳ ತಾಳ ವಾದ್ಯವನ್ನು ಬಾರಿಸಿಕೊಂಡು ಹಾಡುವ ತಮಿಳುನಾಡಿನ ಪೊಂಬೈ ಗಾಯಕರು ಕಥೆಯೊಂದನ್ನು ಹೇಳುತ್ತಾರೆ.

"ಶಕ್ತಿಯೇ ಪಾರ್ವತಿ" ಅವಳು ದಿನನಿತ್ಯ ನದಿಗೆ ಹೋಗಿ ಮರಳಿನಲ್ಲಿ ಮಡಿಕೆಮಾಡಿ ನೀರು ತರುತ್ತಿದ್ದಳು. ಒಂದು ಸಾರಿ ನದಿಯಲ್ಲಿ ಜಲಕ್ರೀಡೆಯಾಡುತ್ತಿದ್ದ ಗಂಧರ್ವ ಸ್ತ್ರೀ–ಪುರುಷರನ್ನು ಕಂಡು ಅವಳ ಮನಸ್ಸು ಸಂಚಲನಗೊಂಡು ಅವಳ ಪಾತಿವ್ರತ್ಯಕ್ಕೆ ಧಕ್ಕೆ ಒದಗಿತು. ಮರಳಿನಲ್ಲಿ ಮಡಿಕೆ ಮಾಡುವ ಶಕ್ತಿ ನಷ್ಟವಾಯಿತು. ಇದನ್ನರಿತ ಶಿವನು ತನ್ನ ಮಕ್ಕಳಿಗೆ ಅವಳ ತಲೆ ಕತ್ತರಿಸಲು ಹೇಳಿದಾಗ ಕೊನೆಯ ಮಗ ಪರಶುರಾಮನು ತಾಯಿಯ ತಲೆ ಕಡಿದು, ಸಂತುಷ್ಟನಾದ ತಂದೆಯಿಂದ ಮತ್ತೆ ಅವಳು ಜೀವಂತವಾಗುವ ವರ ಬೇಡಿ ಪಡೆದನು. ಅದರಂತೆ ಶಿವನು ಅನುಗ್ರಹಿಸಿದನಾದರೂ ಪತ್ನಿಯ ಮೇಲಿನ ಸಿಟ್ಟು ಹೋಗದೆ ತಪಸ್ಸಿಗೆ ಕೂತನು. ಆತನ ಸುತ್ತ ವಿಭೂತಿಯ ಕೋಟೆ ಕಟ್ಟಿಕೊಂಡಿತು. ಆಗ ಶಿವನು ಜಮದಗ್ನಿಯಾದನು. ಬ್ರಹ್ಮ, ವಿಷ್ಣು ಮೊದಲಾದವರು ಅಲ್ಲಿಗೆ ಬಂದಾಗ ವಿಭೂತಿಯ ಕೋಟೆ ಒಡೆದು ಶಿವನು ಸುತ್ತ ಇದ್ದ ಬೆಂಕಿ ಶಾಂತವಾಯಿತು. ಆಗ ಅಲ್ಲಿಗೆ ಬಂದ ಪಾರ್ವತಿಯ ಗಂಡನೇ ನನ್ನ ಕೈ ಬಿಟ್ಟರೆ ಮತ್ತಾರು ಗತಿ ಎಂದು ಬೇಡಿಕೊಂಡಳು.

ದೇವತೆಗಳೆಲ್ಲರೂ ಆಲೋಚಿಸಿ ಐದು ಮುತ್ತುಗಳನ್ನು ಕೊಟ್ಟರು. ಅವುಗಳನ್ನು ಮರಳಲ್ಲಿ ಹೂತರೆ ಊರಿಗೆ ಖಾಯಿಲೆ ಬರುವುದು. ಅದರ ಪರಿಹಾರಕ್ಕಾಗಿ ಜನ ಆಕೆಯನ್ನು ಕರೆದು ಉತ್ಸವ ಮಾಡಿ ಬಲಿಯನ್ನು ಕೊಡುವರು ಎಂದು ತಿಳಿಸಿದರು. ಪಾರ್ವತಿಯು ಆ ಐದು ಮುತ್ತುಗಳನ್ನು ಮರಳಲ್ಲಿ 'ಬಚ್ಚಿಟ್ಟು' ಊರಿಗೆ ಖಾಯಿಲೆಯಾಗಿ ಬಂದಳು. ಅವಳನ್ನು ಕೆರೆಯಿಂದ ತಂದು ಪೂಜಿಸಿ ಮತ್ತೆ ಕೆರೆಯಲ್ಲಿ ಬಿಟ್ಟಾಗ ಶಾಂತವಾಗುತ್ತಾಳೆ. ಕೆರೆ ನೀರಿನಲ್ಲಿರುವ ಆಕೆ "ಗಂಗಮ್ಮ', ರೋಗಗಳಾಗಿ 'ಕಾಲೇರಮ್ಮ', 'ತಟ್ಟಮ್ಮ', ಇತ್ಯಾದಿಯಾಗಿ ಕಾಣಿಸಿಕೊಳ್ಳುತ್ತಾಳೆ. ಹೀಗೆ ಪಾರ್ವತಿಯ ಬದಲಾದ ಗುಪ್ತ, ರೂಪವೇ ಮಾರಿಯಮ್ಮ ಎಂದು ಹೇಳುತ್ತಾರೆ." ವಾಸ್ತವವಾಗಿ ಈ ಕಥೆ ರೇಣುಕಾದೇವಿಗೆ ಸಂಬಂಧಿಸಿದ್ದು, ರೇಣುಕಾದೇವಿ ಜಾನಪದ ಮೂಲದಲ್ಲಿ ಎಲ್ಲಮ್ಮ ಎನಿಸಿಕೊಂಡಿದ್ದಾಳೆ. ಅಂದರೆ ಎಲ್ಲರ ಅಮ್ಮನೇ ಎಲ್ಲಮ್ಮನಾಗಿದ್ದಾಳೆ. ಆರ್ಯ ದ್ರಾವಿಡರಿಬ್ಬರೂ ಪೂಜಿಸುವ, ಆರಾಧಿಸುವ ಮಾತೃದೇವತಾ ಉಪಾಸನೆಯ ಸಾಂಕೇತಿಕ ರೂಪವಾಗಿ ಮಾರಮ್ಮಾ ಗೋಚರಿಸಿರುವುದನ್ನು ಮೇಲಿನ ಕಥೆಯಿಂದ ಅರಿಯಬಹುದು.

ಮಾರಮ್ಮನ ಬೆಳವಣಿಗೆಯ ಸ್ವರೂಪವನ್ನು ಡಾ. ಅರವಿಂದ ಮಾಲಗತ್ತಿಯವರು ಐದು ಹಂತಗಳಲ್ಲಿ ಗುರುತಿಸಿದ್ದಾರೆ.

1. ವೃಕ್ಷ ದೇವತೆಯಾಗಿ
2. ಸಂತಾನ ಪ್ರಾಪ್ತಿಯ ದೇವತೆಯಾಗಿ
3. ರೋಗ ನಿವಾರಣಾದೇವತೆಯಾಗಿ
4. ಪುರಾಣ ದೇವತೆಯಾಗಿ
5. ಸಂಕೀರ್ಣ ವ್ಯಕ್ತಿತ್ವದ ದೇವತೆಯಾಗಿ (ಜನಾಂಗಿಕ ವ್ಯಕ್ತಿತ್ವದ ದೇವತೆಯಾಗಿ)

ಈ ಐದು ಹಂತಗಳನ್ನು ಸ್ಥೂಲವಾಗಿ ನಾವಿಲ್ಲಿ ಪರಿಭಾವಿಸಬಹುದಾಗಿದೆ.

ನಮ್ಮ ಪೂರ್ವಜರ ಕಾಲದಿಂದಲೂ ವೃಕ್ಷರಾಧನೆ ನಡೆಯುತ್ತಾ ಬಂದಿದೆ. ಇದರ ಫಲವಾಗಿ ಬೇವಿನ ಮರವನ್ನು ಮಾರಮ್ಮನ ಗರ್ಭಗುಡಿಯೊಳಗೆ ಸೇರಿಸಿ ದೇವಸ್ಥಾನ ಕಟ್ಟುವುದು. ಬೇವಿನ ಮರ ಇಲ್ಲದ ಕಡೆಗಳಲ್ಲಿ ಮಾರಮ್ಮನ ಗುಡಿಯ ಎದುರು ಅಥವಾ ಸುತ್ತಮುತ್ತ ಬೇವಿನ ಮರಗಳನ್ನು ಬೆಳೆಸಿರುವುದು ಕಂಡು ಬರುತ್ತದೆ. ಮಾರಮ್ಮನನ್ನು ಸಸ್ಯ ಒಡತಿ ಎಂದು ಭಾವಿಸುವುದು, ಮಾರಮ್ಮ ಬೇವಿನ ಮರದಲ್ಲಿ ವಾಸಿಸುತ್ತಾಳೆಂಬ ನಂಬಿಕೆ ಇತ್ಯಾದಿಗಳೆಲ್ಲವೂ ಮಾರಮ್ಮನನ್ನು ವೃಕ್ಷರೂಪದಲ್ಲಿ ಪೂಜಿಸುವುದಕ್ಕೆ ಹಾದಿ ಮಾಡಿಕೊಟ್ಟಿವೆ. ಮಾರಮ್ಮನ ಆರಾಧನಾಗಳಲ್ಲಿ ಬೇವಿನ ಉಡಿಗೆ ಸೇವೆಯೂ ಮುಖ್ಯವಾದುದಾಗಿದೆ. ಬೇವು ಮಾರಮ್ಮನ ಪ್ರಸಾದ ಎಂದು ನಂಬುತ್ತಾರೆ.

ಮಕ್ಕಳಿಲ್ಲದ ದಂಪತಿಗಳು ಮಕ್ಕಳಿಗಾಗಿ ಮಾರಮ್ಮನಿಗೆ ಹರಕೆ ಹೊರವುದು ರೂಢಿ. ದೈವಾನುಗ್ರಹದಿಂದ ಮಕ್ಕಳು ಜನಿಸಿದಾಗ ಮಾರಮ್ಮನಿಗೆ ತೊಟ್ಟಿಲು ಹರಕೆ ಸಲ್ಲಿಸುತ್ತಾರೆ. ಮಾರಮ್ಮ ಸಂತಾನ ಪ್ರಾಪ್ತಿ ದೇವತೆ ಎಂಬುದಕ್ಕೆ ಜನಪದರು ಹೊರುವ ಹಾಗೂ ನಡೆಸಿಕೊಡುವ ಈ ಹರಕೆ ಸಾಕ್ಷಿ.

ಸಾಂಕ್ರಾಮಿಕ ರೋಗಗಳಾದ ಗೋಣಿ, ಸಿಡುಬು, ಕಾಲರಾ, ಪ್ಲೇಗು, ಗಂಟಲು ಬಾವು, ಮೊದಲಾದ ರೋಗಗಳನ್ನು ರುದ್ರರೂಪಿಯಾದ ಮಾರಿಯು ತನ್ನ ತಂಗಿಯರಾದ ವಿಭಿನ್ನ ಹೆಸರುಗಳನ್ನೊಳಗೊಂಡ

ಅಮ್ಮಂದಿರ ಹಾಗೂ ತನ್ನ ಬಂಟ ಸೇವಕರ ಸಹಾಯದಿಂದ ನಿಯಂತ್ರಿಸುತ್ತಾಳೆಂಬ ಬಲವಾದ ನಂಬಿಕೆ ಜನಪದರಲ್ಲಿದೆ. ಮಾರಮ್ಮನಿಗೆ ಅಪಚಾರವೆಸಗಿದಲ್ಲಿ ಮಾರಮ್ಮನನ್ನು ಅಲಕ್ಷಿಸಿದಲ್ಲಿ ಅವಳು ಸಿಟ್ಟಿಗೆದ್ದು ಸಾಂಕ್ರಾಮಿಕ ರೋಗಗಳನ್ನು ಹರಡಿ ಜನರ ಸಾವಿಗೆ ಕಾರಣಳಾಗುತ್ತಾಳೆಂಬ ಕಾರಣದಿಂದಾಗಿಯೇ ಮಾರಮ್ಮನನ್ನು ಪ್ಲೇಗು ಮಾರಿ, ಸಿಡುಬು ಮಾರಿ, ಕಾಲರಾಮಾರಿ, ಗಂಟಲಮಾರಿ ಮೊದಲಾದ ಹೆಸರುಗಳಿಂದಲೂ ಕರೆಯುವರು. ರೋಗ ನಿವಾರಣೆಗಾಗಿ ಮಾರಮ್ಮನಿಗೆ ವಿವಿಧ ಸೇವೆಗಳು, ಹರಕೆಗಳು, ಬಲಿಗಳನ್ನು ಸಲ್ಲಿಸುತ್ತಾರೆ.

ಜಾನಪದ ಮೂಲದ ಮಾರಮ್ಮನನ್ನು ಶಿಷ್ಟಪುರಾಣಗಳೊಂದಿಗೆ ತಳುಕು ಹಾಕುವುದು ವಾಡಿಕೆ. ಇದು ಹಿಂದಿನ ಪರಂಪರೆಯಿಂದಲೂ ಸಾಗಿಕೊಂಡು ಬರುತ್ತದೆ. ಸಜ್ಜನರ ಸಂರಕ್ಷಣೆ, ದುರ್ಜನರ ದಂಡನೆಗಾಗಿ ಬೇರೆ ಬೇರೆ ಹೆಸರುಗಳಲ್ಲಿ ಅವತಾರವೆತ್ತಿದ್ದಾಳೆನ್ನುವುದು, ನವದುರ್ಗಿ ಸಪ್ತಮಾತೃಕೆಯರಲ್ಲಿ ಒಬ್ಬಳೆಂದು ಉಲ್ಲೇಖಿಸುವುದು, ಮಾರಿಕಾಂಭೆ ಎಂದು ಸಂಸ್ಕೃತೀಕರಣಗೊಳಿಸುವುದು. ಮಹಿಷಾಸುರ ಮರ್ದಿನಿ ಕಥೆಯನ್ನು ಸಮೀಕರಿಸುವುದು.... ಇತ್ಯಾದಿ ಕ್ರಿಯೆಗಳೆಲ್ಲವೂ ಗ್ರಾಮೀಣ ದೇವತೆಯನ್ನು ಪ್ರತಿ ದೇವತೆಯನ್ನಾಗಿಸುವ ಪ್ರಯತ್ನಗಳಾಗಿರುತ್ತವೆ.

ಮಾರಮ್ಮ ಜನಾಂಗಿಕ ವ್ಯಕ್ತಿತ್ವದ ದೇವತೆಯಾಗಿ ಬೆಳವಣಿಗೆ ಸಾಧಿಸಿದ್ದಾಳೆಂಬುದಕ್ಕೆ ಹಿಂದಿನಿಂದಲೂ ಮಾರಮ್ಮನ ಸೇವೆ ಸಲ್ಲಿಸುತ್ತಾ ಬಂದಿರುವ ಆದಿಕರ್ನಾಟಕ ಅದರಲ್ಲೂ ಮಾದಿಗರ ಮತ್ತು ಚಕವಾದಿಗಳ ಪಾತ್ರ ಪ್ರಮುಖವಾದುದು. ಮಾರಮ್ಮನ ಸಾಂಪ್ರದಾಯಿಕ ವಿಧಿವತ್ತಾದ ಆಚರಣೆಗಳಲ್ಲಿ ಆರಾಧನೆಗಳಲ್ಲಿ ಅಧಿಕೃತವಾಗಿ ಒಳಹೊಕ್ಕು ಒಂದಾಗುವ ಸ್ವಾತಂತ್ರ್ಯ ಈ ಜನಾಂಗದವರಿಗಿದೆ.

ಹೀಗೆ ಐದು ಹಂತಗಳಲ್ಲಿ ಬೆಳವಣಿಗೆ ಸಾಧಿಸಿರುವ ಮಾರಮ್ಮನನ್ನು ಕುರಿತಾದಂತೆ ಕರ್ನಾಟಕದಾದ್ಯಂತ ಜನಜನಿತವಾದ ಐತಿಹ್ಯವೊಂದಿದೆ. ತುಸು ಹೆಚ್ಚು ಕಡಿಮೆ ಭಿನ್ನ ಪಾಠಾಂತರಗಳಿದ್ದರೂ ಸಹ ಆಶಯ ಮಾತ್ರ ಒಂದೇ ಬಗೆಯಲ್ಲಿದೆ.

**ಪರಾಮರ್ಶನ ಗ್ರಂಥಗಳು**


- ರಹಮತ್ ತರೀಕೆರೆ. (2017). ಸಾಂಸ್ಕೃತಿಕ ಅಧ್ಯಯನ, ಅಭಿನವ ಪ್ರಕಾಶನ. ಬೆಂಗಳೂರು.
- ಸಿದ್ದಲಿಂಗಯ್ಯ. (2015). ಗ್ರಾಮ ದೇವತೆಗಳು, ಅಂಕಿತ ಪುಸ್ತಕ. ಬೆಂಗಳೂರು.